# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

1 ರಿಂದ 4ನೇ ಮಹಡಿ, 5ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು. 560 001.
ಕಛೇರಿ ದೂ. 22392203, ಫ್ಯಾಕ್ಸ್ 22392206/07, ಮೇಲ್ kshrc2007@gmail.com

ಸಂಖ್ಯೆ:ಮಾ.ಹ.ಆ. 2679/10/31/2016 (B3) ದಿನಾಂಕ: 07.07.2020

ಇಂದ:
ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

ಇವರಿಗೆ:
ಪ್ರಾದೇಶಿಕ ಆಯುಕ್ತರು,
ಬೆಂಗಳೂರು ವಿಭಾಗ, ಗಾಂಧಿ ನಗರ
ಬೆಂಗಳೂರು.

ಮಾನ್ಯರೆ,

ವಿಷಯ: ಹೆಚ್‌ಆರ್‌ಸಿ ಸಂಖ್ಯೆ: 2679/10/31/2016 ರ ಪ್ರಕರಣದ ಬಗ್ಗೆ.

ಉಲ್ಲೇಖ: ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ಅವರ ಕಛೇರಿಯ ಪತ್ರದ ಸಂಖ್ಯೆ: ಸಿಬ್ಬಂದಿ(ದೂರು)ಸಿಆರ್ 103/2014-15, ದಿನಾಂಕ: 12.02.2020.

*****

ಮೇಲ್ಕಂಡ ಪ್ರಕರಣವನ್ನು ದಿನಾಂಕ: 10.07.2020 ರಂದು ಆಯೋಗದ ಮುಂದೆ ಮಂಡಿಸಿದಾಗ, ಆಯೋಗವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ:-

ಆದೇಶ

*"ಶ್ರೀ ಕೆ.ಎಂ ಚಿಕ್ಕದಾಳಪ್ಪ ಬಿನ್ ಲೇಟ್ ಮುನಿವೆಂಕಟಪ್ಪ, ನಂ.2, ಮಾರುತಿನಗರ, ಸಹಕಾರನಗರ ಅಂಚೆ, ಬೆಂಗಳೂರು ಅವರು ಆಯೋಗಕ್ಕೆ ದೂರು ಸಲ್ಲಿಸಿ, ಬೆಂಗಳೂರು ಪೂರ್ವ ತಾಲ್ಲೂಕು ಕಮ್ಮಸಂದ್ರ ಗ್ರಾಮದ ತೋಟಿ ಸ.ನಂ.4 ರಲ್ಲಿ 4 ಎಕರೆ 32 ಗುಂಟೆ ಹಾಗೂ ಸ.ನಂ.10 ರಲ್ಲಿ 30 ಗುಂಟೆ ಜಮೀನನ್ನು ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್ ರವರು ಎಂ.ಎ.ನಂ. 9/2001 ರ ಜಿಲ್ಲಾ ನ್ಯಾಯಾಲಯದ ಆದೇಶವನ್ನು ತಿರಸ್ಕರಿಸಿ ತಪ್ಪು ವರದಿ ನೀಡಿ ಪೋಡಿ ಮತ್ತು ಖಾತೆ ವರ್ಗಾವಣೆ ಮಾಡಿರುವ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್ ಮತ್ತು ಸಂಬಂಧಪಟ್ಟವರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸುವಂತೆ ಕೋರಿದ್ದಾರೆ.*

*ಪ್ರಕರಣಕ್ಕೆ ಸಂಬಂಧಿಸಿದಂತೆ, ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ರವರ ಕಾರ್ಯಾಲಯದಿಂದ ಅಗತ್ಯ ಮಾಹಿತಿಯನ್ನು ಪಡೆಯಲಾಗಿ, ಸದರಿ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ತಪ್ಪಿತಸ್ಥ ಅಧಿಕಾರಿಗಳಾದ ಶ್ರೀ ಬಿ.ಆರ್ ಹರೀಶ್, ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಹಾಗೂ ನೌಕರರಾದ ಶ್ರೀ ಪಿ.ಹೆಚ್ ಶೇಖರಪ್ಪ, ಉಪತಹಶೀಲ್ದಾರ್. ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ಮತ್ತು ಶ್ರೀ ಬಿ ಹೆಚ್ ಆರ್ ಅನಿಲ್ ಕುಮಾರ್, ರಾಜಸ್ವ ನಿರೀಕ್ಷಕರು. ಬಿದರಹಳ್ಳಿ ವೃತ್ತ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ರವರುಗಳ*

ವಿರುದ್ಧ ದೋಷರೋಪಣ ಪಟ್ಟಿಯನ್ನು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ಮೂಲ ಕಡತ ಪು ಸಂಖ್ಯೆ: 01 ರಿಂದ 508 ದೊಂದಿಗೆ ಸಲ್ಲಿಸಲಾಗಿರುತ್ತದೆ.

ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ, ಬೆಂಗಳೂರು ಅವರ ನಿರ್ದೇಶನದಂತೆ ದಿನಾಂಕ: 03.07.2019 ರಂದು ಶಿಸ್ತು ಕ್ರಮ ಜರುಗಿಸಲು ಈ ಕಾರ್ಯಾಲಯದಿಂದ ಕರಡು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿದ್ದು, ಸದರಿ ಪ್ರಕರಣದಲ್ಲಿ ತಹಶೀಲ್ದಾರ್ ಹುದ್ದೆಯ ಅಧಿಕಾರಿ ಭಾಗಿಯಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ವ.ನಿ.ಮೇ) 1957 ರ ನಿಯಮ 13 ರಂತೆ ಜಂಟಿ ಇಲಾಖೆ ವಿಚಾರಣೆಯನ್ನು ಸರ್ಕಾರದ ಹಂತದಲ್ಲಿ ಕೈಗೊಳ್ಳಬೇಕಾಗಿರುತ್ತದೆ. ಸದರಿ ಪ್ರಕರಣದಲ್ಲಿ ಈ ಕಾರ್ಯಾಲಯದಿಂದ ಯಾವುದೇ ರೀತ್ಯ ವಿಳಂಬಕ್ಕೆ ಅವಕಾಶ ನೀಡದೇ ಅಗತ್ಯ ಕ್ರಮ ಕೈಗೊಳ್ಳಲಾಗಿರುವುದರಿಂದ, ವಿಚಾರಣೆಯಿಂದ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ಅವರು [redacted], ಕೈಬಿಡುವಂತೆ ಕೋರಿದ್ದಾರೆ

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ಜಾರಿ ಆಗಿ ಸ್ವೀಕೃತಿ ಬಂದಿದೆ. ಆದರೆ ಅಭಿಪ್ರಾಯ ಸಲ್ಲಿಸಿರುವುದಿಲ್ಲ.

ದೂರು ಮತ್ತು ವರದಿಯನ್ನು ಪರಿಶೀಲಿಸಲಾಗಿ, ಸದರಿ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ತಪ್ಪಿತಸ್ಥ ಅಧಿಕಾರಿಗಳಾದ ಶ್ರೀ ಬಿ.ಆರ್ ಹರೀಶ್, ತಹಶೀಲ್ದಾರ್, ಶ್ರೀ ಪಿ.ಎಚ್ ಶೇಖರಪ್ಪ ಉಪತಹಶೀಲ್ದಾರ್ ಮತ್ತು ಹೆಚ್.ಆರ್ ಅನಿಲ್ ಕುಮಾರ್ ರಾಜಸ್ವ ನಿರೀಕ್ಷಕರು ಅವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯ ಪ್ರಗತಿಯ ಬಗ್ಗೆ ಸರ್ಕಾರದೊಂದಿಗೆ ವ್ಯವಹರಿಸಿ ಅನುಸರಣಾ ಕ್ರಮ ವಹಿಸುವಂತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ಆಯೋಗಕ್ಕೆ ಅನುಸರಣಾ ವರದಿ ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಅವರಿಗೆ ಸೂಚಿಸಿ ಆಯೋಗದಲ್ಲಿ ಪ್ರಕರಣವನ್ನು ಮುಕ್ತಾಯ ಗೊಳಿಸಲಾಗಿದೆ."

Sd/-
(ಆರ್.ಕೆ ದತ್ತ)
ಸದಸ್ಯರು

ಮೇಲ್ಕಂಡ ಆದೇಶದಂತೆ ಈ ಆದೇಶದ ಪತ್ರವನ್ನು ತಮಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಹಾಗೂ ಪ್ರಕರಣವನ್ನು ಮುಕ್ತಾಯಗೊಳಸಲಾಗಿದೆ ಎಂದು ತಮಗೆ ಸೂಚಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
(signature) 2/3/2020
ಸಹಾಯಕ ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಪ್ರತಿಯನ್ನು:

1. ಶ್ರೀ ಕೆ.ಎಂ ಚಿಕ್ಕದಾಳಪ್ಪ ಬಿನ್ ಲೇಟ್ ಮುನಿವೆಂಕಟಪ್ಪ, ನಂ 2, ಮಾರುತಿನಗರ, ಸಹಕಾರನಗರ ಅಂಚೆ, ಬೆಂಗಳೂರು: 560 092 – ರವರ ಮಾಹಿತಿಗಾಗಿ
2. ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು - ರವರ ಮಾಹಿತಿಗಾಗಿ

ಸೂಚನೆ: ದಯವಿಟ್ಟು ಇನ್ನು ಮುಂದೆ ಮಾಡುವ ಪತ್ರ ವ್ಯವಹಾರ/ವರದಿ/ಅಭಿಪ್ರಾಯ, ಇತ್ಯಾದಿಗಳಲ್ಲಿ ಹೆಚ್‌ಆರ್‌ಸಿ ಸಂಖ್ಯೆಯನ್ನು ನಮೂದಿಸುವುದು